ಉಲ್ಟಾ ಮಾಡಿ ರುಮ್ಮನೆ ಬೆನ್ನಿಗೆ ಗುದ್ದಿದರೆ ಬಾದಾಮಿ ಗಂಟಲಿಂದ ಜಿಗಿದು ಅವರವ್ವನ ಮೋರೆಗೆ ಬಡಿದಿತ್ತಂತೆ. 'ಏನರೇ ಸಮಸ್ಯಾ ಇರಲಿ, ಅಂಬಕ್ಕ ಇದ್ದರ ಕಾಳಜಿ ಇಲ್ಲವಾ' ಅನ್ನೋ ಭರವಸೆ ಎಲ್ಲರಿಗೂ. 'ಇಂತಹ ಜೀವವನ್ನು ನಾ ವೃದ್ಧಾಶ್ರಮಕ್ಕೆ ಕಳಿಸಲೆ? ಭಗವಂತಾ ಎಂಥಾ ಸಂಕಟಕ್ಕೆ ಸಿಲುಕಿಸಿದಿ ನನ್ನನ್ನು? ನಿರ್ಮಲಾಳಿಗೆ ತಿಳಿಸಿ ಹೇಳುವ ಸ್ಥೈರ್ಯ ನನ್ನಲ್ಲಿಲ್ಲ, ಏನು ಮಾಡಲಿ?' ವಿಲಿವಿಲಿ ಒದ್ದಾಡಿತವನ ಜೀವ. ಅಪ್ಪನ ಕೊನೆಯ ದಿನಗಳು ನೆನಪಾಗಿ ಸಂಕಟ ಮತ್ತೂ ತೀಕ್ಷ್ಣವಾಯಿತು, ಹೊಟ್ಟೆಯಲ್ಲಿ ಗಂಟಾಗಿದ್ದು ಅರ್ಬುದ ಅಂತ ತಿಳಿಯುವಷ್ಟರಲ್ಲಿ ಕಡೆಯ ಹಂತದಲ್ಲಿತ್ತು ರೋಗ. ಅಸಹನೀಯ ನೋವು, ರಕ್ತ ವಾಂತಿ ಕಂಡೇ ಮನೆಮಂದಿಯ ಎದೆಯೊಡೆದಿತ್ತು. ''ರಾಮಣ್ಣನಂಥಾ ಪುಣ್ಯಜೀವಿಗೆ ಇಂಥಾ ಕೊನೇನ?'' ಅಂತ ಅತ್ತಿ ದಿನಾ ಕಣ್ಣೀರು ಹಾಕುವಾಕಿ, ''ಯಾವ್ದರೇ ದಿವ್ಯ ಪುರುಷ ಬಾಗಿಲಿಗೆ ಬೇಡಲಿಕ್ಕೆ ಬರಬೇಕಂತ. ಆಗ ಚಮತ್ಕಾರ ಆಗ್ತಾವಂತೋ ಕೇಶವಾ. ನೀ ಧೀರ ಕಳ್ಕೋಬ್ಯಾಡ'' ಅನ್ನಾಕಿ, ದಿವ್ಯ ಪುರುಷ ಹೋಗಲಿ ಹೊಸಲಲ್ಲೇ ಬಾಯ್ದೆರೆದು ನಿಂತ ಸಾವು ಕೂಡ ಬಾರದೇ ಕಾಡಿತ್ತು. ಕಡೆಗೆ ಮನೆತನದ ಗುರುಗಳಾದ ರುಚಿರಾಚಾರ್ಯರು ಬಂದು, "ಕೇಶವಾ ನಾ ಮನಿಮಗಳು ಅಂಬಕ್ಕತ್ತಿಯ ಕೈ ಬಿಡೂದಿಲ್ಲ, ಕಡೀತನಕ ನೋಡಿಕೋತೇನಿ ಅಂತ ನಿಮ್ಮಪ್ಪಗ ವಚನ ಕೊಟ್ಟು ಬಾಯಾಗ ಗಂಗಾಜಲ ಹಾಕಪ್ಪಾ" ಅಂದಾಗ ಹಾಗೆಯೇ ಮಾಡಿದ್ದ ಕೇಶವ. ಆಶ್ಚರ್ಯ ಎನಿಸುವಂತೆ ಬೆಳಗಾಗುವುದರಲ್ಲಿ ಮೃತ್ಯು ಬಂದಿತ್ತು.

'ಆ ವೃದ್ಧಾಶ್ರಮದ ಮಂದಿ ಅವಳನ್ನು ಕರೆದುಕೊಳ್ಳುವುದಿಲ್ಲ ಎನ್ನಲಿ, ಪಲ್ಲೂ ಏನರೆ ಕಾರಣಾಂತರ

